ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ

೧೭೮೪. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಠಕಲ್).—ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೮ನೇ ಸಾಲಿಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮಂಜೂರಾದ ಹಣ, ಬಿಡುಗಡೆ ಮಾಡಿದ ಮತ್ತು ಖರ್ಚಾದ ಹಣ ಎಷ್ಟು ? (ಇದರಲ್ಲಿ ಕಾಲುವೆ ಮತ್ತು ಆಣೆಕಟ್ಟುಗಳ ಮೇಲೆ ಆದ ವೆಚ್ಚವನ್ನು ಬೇರೆಯಾಗಿ ಕೊಡಬೇಕು)

ಆ) ೧೯೮೬–೮೮ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರವು ನಿಗದಿ ಪಡಿಸಿದ ಗುರಿಯೊಂದಿಗೆ ಸಾಧಿಸಿದ ನೀರಾವರಿ ಸಾಮರ್ಥ್ಯವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ೧೯೮೬–೮೮ನೇ ಸಾಲಿನ ವಿವರಗಳು ಈ ರೀತಿ ಇದೆ.

೧	ಆಯವ್ಯಯದಂತೆ ನಿಗದಿ ಪಡಿಸಿದ ಹಣ	...	೮೫ ಕೋಟಿ ರೂಪಾಯಿಗಳು.
೨	ಪರಿಷ್ಕರಿಸಿದ ಮೊತ್ತ	...	೪೨.೫೧ ,,
೩	ಬಿಡುಗಡೆ ಮಾಡಿದ ಹಣ	...	೪೩.೪೭ ,,
೪	ವೆಚ್ಚ	...	೪೩.೪೭ ,,

ಕಾಲುವೆ ಮತ್ತು ಆಣೆಕಟ್ಟುಗಳಿಗೆ ವೆಚ್ಚವಾದ ಹಣ ಕ್ರಮವಾಗಿ ೨೨.೯೦ ಕೋಟಿ ರೂ.ಗಳು ಮತ್ತು ೧೧.೪೨ ಕೋಟಿ ರೂಪಾಯಿಗಳು (ಭೂಸ್ವಾಧೀನ, ಕಟ್ಟಡಗಳು, ಮತ್ತು ಇತರೇ ವೆಚ್ಚ ಸೇರಿ, ಆದರೆ ಸಿಬ್ಬಂದಿ ವೆಚ್ಚ ಬಿಟ್ಟು)

ಆ) ೧೯೮೬–೮೮ನೇ ಸಾಲಿಗೆ ಮೊದಲು ನಿಗದಿ ಪಡಿಸಿದ ನೀರಾವರಿ ಸಾಮರ್ಥ್ಯದ ಗುರಿ ೧೬,೭೦೨ ಹೆಕ್ಟೇರುಗಳು. ಮುಂದೆ ಇದನ್ನು ೪೫೬೦ ಹೆಕ್ಟೇರುಗಳಿಗೆ ಪರಿಷ್ಕರಿಸಲಾಯಿತು. ಸಾಧನೆ ೪೬೯೨ ಹೆಕ್ಟೇರುಗಳು.

ವರದಿಯನ್ನೊಪ್ಪಿಸುವುದು.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖಿ ಮದನ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) ಇವರ ಪರವಾಗಿ ಮಾನ್ಯ ಅಧ್ಯಕ್ಷರೇ, ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಕಾರ್ಯಗಳ ಬಗ್ಗೆ ಸಮಿತಿಯು ೩೪ನೇ ವರದಿಯನ್ನು ಹಾಗೂ ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ೧೧ನೇ ವರದಿಯಲ್ಲಿನ (೫ನೇ ವಿಧಾನ ಸಭೆ) ಶಿಫಾರಸ್ಸುಗಳ ಮೇಲೆ ಸರಕಾರದವರು ತೆಗೆದುಕೊಂಡ ಕ್ರಮದ ಬಗ್ಗೆ ಸಮಿತಿಯ ೩೫ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದಿಡಲಾಯಿತು.

ಗಮನ ಸೆಳೆಯುವ ಸೂಚನೆಗಳು.

ಕಂದೂರು ಗ್ರಾಮದ ಸ. ನಂ. ೪೫೫/೪೬ರಲ್ಲಿ ಹಿಂದುಳಿದ ವರ್ಗದ ಜನರ ಸ್ವಾಧೀನದಲ್ಲಿದ್ದ ಜಮೀನಿನ ಮೇಲೆ ಅಕ್ರಮಣ ನಡೆಸಿರುವ ಬಗ್ಗೆ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನ ಹೊಸ ಕಂದೂರು ಗ್ರಾಮದ ಸರ್ವೆ ನಂ. ೪೫೫/೪೬ರಲ್ಲಿ ಹಿಂದುಳಿದ ವರ್ಗದ ಜನರ ಸ್ವಾಧೀನದಲ್ಲಿದ್ದ ಜಮೀನಿನ ಮೇಲೆ ದಿನಾಂಕ ೧೯-೫-೮೮ರಂದು ಆಕ್ರಮಣ ನಡೆಸಿ ದೌರ್ಜನ್ಯದಿಂದ ತೆಂಗಿನ ಸಸಿಗಳನ್ನು ಮತ್ತು